1643(2139) ಶ್ರೀ ಶಂಕರಲಿಂಗೇಗೌಡ. ಹೆಚ್.ಎಸ್. (ಚಾಮರಾಜ) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಕೆ.ಆರ್.ಎಸ್.ನಲ್ಲಿ ಈಗಿರುವ ನೀರಿನ ಪ್ರಮಾಣವೆಷ್ಟು?

ಆ. ಬೇಸಿಗೆ ಅವಧಿಯಲ್ಲಿ ಮೈಸೂರು ನಗರಕ್ಕೆ ಕುಡಿಯುವ ನೀರಿನ ತೊಂದರೆ ಆಗದಂತೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ:

ಇ. ಈ ಸಂಬಂಧ ಹೆಚ್ಚುವರಿಯಾಗಿ ಎಷ್ಟು ಟ್ಯಾಂಕರ್‌ಗಳನ್ನು ಬಳಸಿಕೊಳ್ಳಲಾಗುವುದು;

ಈ. ಈ ನಿಟ್ಟಿನಲ್ಲಿ ಸರ್ಕಾರ ಎಷ್ಟು ಹಣ ವೆಚ್ಚ ಮಾಡಬೇಕಾಗುತ್ತದೆ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಗಳು):

ಅ. 8218 ಎಂಸಿಎಫ್ ನೀರಿನ ಪ್ರಮಾಣ ಇರುತ್ತದೆ.

ಆ. ನದಿಯ ಪಾತ್ರದಿಂದ ನೀರೆತ್ತುವ ವ್ಯವಸ್ಥೆಯು 12.00 ಎಂ.ಜೆ.ಗಳಾಗಿದ್ದು, 8 ಎಂ.ಜೆ. ನೀರೆತ್ತುವ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ನೀರಿನ ಪ್ರಮಾಣ ಗಣನೀಯವಾಗಿ ಕಡಿಮೆಯಾದಾಗ ತುರ್ತು ಯಂತ್ರಾಗಾರವನ್ನು ಚಾಲನೆ ಮಾಡಲು ಕ್ರಮ ವಹಿಸಲಾಗುವುದು. ಈಗಾಗಲೇ 6 ಟ್ಯಾಂಕರ್‌ಗಳನ್ನು ನೀರು ಸರಬರಾಜು ಮಾಡಲು ಬಳಸಿಕೊಳ್ಳಲಾಗುತ್ತಿದೆ. ಅಭಾವವಿರುವ ಪ್ರದೇಶದಲ್ಲಿ ಹೊಸದಾಗಿ 15 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ.

ಇ. ಪ್ರಸ್ತುತ 6 ಟ್ಯಾಂಕರ್‌ಗಳನ್ನು ಮೈಸರು ನಗರದಲ್ಲಿ ಪ್ರತಿದಿನ ಬಳಸುತ್ತಿದ್ದು, ಈ ಬೇಸಿಗೆಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಟ್ಯಾಂಕರ್‌ಗಳನ್ನು ಹೆಚ್ಚುವರಿಯಾಗಿ ಬಳಸಿಕೊಳ್ಳಲಾಗುವುದು.

ಈ. ಈ ನಿಟ್ಟಿನಲ್ಲಿ ಸುಮಾರು ರೂ. 90.00 ಲಕ್ಷಗಳು ಖರ್ಚಾಗಬಹುದಾಗಿ ಅಂದಾಜಿಸಲಾಗಿದೆ.

1646 (1833) ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ (ಹುಕ್ಕೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಹುಕ್ಕೇರಿ ಮತಕ್ಷೇತ್ರದಲ್ಲಿ ಬಸ್ ಸೌಕರ್ಯಗಳಿಲ್ಲದೆ ಜನರು ಖಾಸಗಿ ವಾಹನಗಳಲ್ಲಿ ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಬಸ್ ಸೌಕರ್ಯ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;

ಇ. ಪ್ರಯಾಣಿಕರು ಖಾಸಗಿ ವಾಹನಗಳ ಟಾಪ್ ಮೇಲೆ ಕುಳಿತು ಸಂಚರಿಸುವುದನ್ನು ತಡೆಗಟ್ಟಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಹೌದು.

ಆ. ಗೋಕಾಕ್, ಸಂಕೇಶ್ವರ ಮತ್ತು ಚಿಕ್ಕೋಡಿ ಘಟಕಗಳಿಂದ ಈಗಾಗಲೇ ಆಚರಣೆ ಮಾಡುತ್ತಿರುವ 360 ಸುತ್ತುವಳಿಗಳ ಜೊತೆಗೆ ಹೆಚ್ಚುವರಿಯಾಗಿ 20 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುವುದು.

ಇ. ಹೌದು.

1648(1827) ಶ್ರೀ ಶಿವಣ್ಣ ಜಿ. (ರಾಣಿಬೆನ್ನೂರು) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಾಣಿಬೆನ್ನೂರು ತಾಲ್ಲೂಕು ಗುಡಗೂರು ಕೆರೆಯ ವಿಸ್ತೀರ್ಣವೆಷ್ಟು;